**IN THE COURT OF THE VI ADDL.DISTRICT & SESSIONS JUDGE, BANGALORE RURAL DISTRICT, BANGALORE.**

**SC.NO.296/2018**

(P.W.8 / C.W.15)

Witness is duly sworn on 17-03-2021.

| | | |
|---|---|---|
| Deposition of | : | Radhamma |
| Husband Name | : | Nagaraju |
| Age | : | 38 years, |
| Occupation | : | Coolie |
| Residence | : | H-Cross. |

**Examination-in-chief: By PP:**

I know deceased Kavitha. I do not know C.W.1 to 5, 14. I had on rented house belongs to C.W.6 at H-Cross. Prior to 4 years, she had called me in respect of dispute and she had taken me to the Nandagudi Police Station, police had taken my signature on the documents. I do not know the contents of document. I can identify the signature. Now, I see the documents. It is marked as Ex.P.16, the signature of the witness is marked as Ex.P.16(a). The police have not recovered the articles in

my presence. I can not identified the clothes shown to me. I do not know the contents of Ex.P.16.

(Learned PP prays to treat this witness as hostile, perused the Ex.P.16. Permission is accorded to treat this witness as hostile)

**Cross-examination By PP:**

It is false to suggest that on 18-11-2017, the police had taken me to the Columbia Asia Hospital Emergency Ward. The police show the C.W.8 and 14, at that time C.W.1 had got injuries and was taking treatment at the hospital. It is false to suggest that C.W.1 produced the blood stained clothes with him, which were wore by him at the time of alleged incident and he also produced the blood stained clothes belongs deceased Kavitha shown to me. It is false to suggest that the police seized the clothes belong to C.W.1 and deceased Kavitha and prepared the mahazar at Ex.P.16 at about 8-30 to 9-30 a.m. It is false to suggest that I put my signature after knowing the contents of Ex.P.16. It is false to suggest that I depose the false things to support the accused persons.

**<u>Cross-examination: By Sri.K.P.R. Advocate for accused No.1 to 3, 5, 6 and accused No.4:</u>**

The counsels for the accused submit no cross of P.W.7.

**<u>Re-Examination:</u>** Nil

[Typed to my dictation in the open court]

R.O.I. & A. C.

(MOHAN BADAGANDI)
VI Addl. District & Sessions Judge.
Bengaluru Rural District,
Bengaluru.

**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.165/2011**

**(ಪ್ರಾ.ಸಾ.1 / ಚಾ.ಸಾ.- 1)**

ತಾಃ 24-04-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಪಾರ್ವತಮ್ಮ

ಗಂಡನ ಹೆಸರು : ಗುರುಪ್ರಸಾದ್
ವಯಸ್ಸು : 55 ವರ್ಷ
ಉದ್ಯೋಗ : ಗೃಹಿಣಿ
ವಾಸ ಸ್ಥಳ : ಶಾಕಲದೇವನಪುರ, ದೊಡ್ಡಬಳ್ಳಾಪುರ ತಾಲ್ಲೂಕು

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

ನೊಂದ ಮಹಿಳೆ/ಚಾಸಾ 2 ನನ್ನ ಮಗಳು. ಚಾಸಾ 2 ಹುಟ್ಟಿದಾಗಿನಿಂದ ಆರೋಗ್ಯವಾಗಿದ್ದಳು ಅವಳಿಗೆ 10ನೇ ತರಗತಿ ಮುಗಿದ ನಂತರ 6 ತಿಂಗಳ ಒಳಗೆ ಡೆಂಗ್ಯೂ ಜ್ವರ ಬಂದು ಬಲಭಾಗದ ಶರೀರ ಸ್ವಾಧೀನ ತಪ್ಪಿದ್ದು ಉಸಿರಾಟ ಸಮಸ್ಯೆ ಆಗಿತ್ತು. 10ನೇ ತರಗತಿ ಕಳೆದ 20 ವರ್ಷಗಳ ಹಿಂದೆ ಮುಗಿದಿದೆ. ಸತತ 1 ವರ್ಷಗಳವರೆಗೆ ಚಿಕಿತ್ಸೆಯನ್ನು ಕೊಡಿಸಿದ ನಂತರ ಉಸಿರಾಟದ ಸಮಸ್ಯೆ ಸರಿಯಾಗಿದ್ದು ದೈಹಿಕ ನ್ಯೂನತೆ ಉಂಟಾಗಿರುತ್ತದೆ ಅವಳ ಕೈ-ಕಾಲು ಸ್ವಾಧೀನದಲ್ಲಿರುವುದಿಲ್ಲ. ಮಾತನಾಡುವುದು ಅರ್ಥವಾಗುತ್ತದೆ ಆದರೆ ಅವಳಿಗೆ ಹೇಳಲು ಆಗುವುದಿಲ್ಲ. ಆದ್ದರಿಂದ ಸ್ಪಷ್ಟವಾಗಿ ಮಾತನಾಡುವ ಸಮಸ್ಯೆಯನ್ನು ಎದುರಿಸುತ್ತಿದ್ದಾಳೆ. ಸಾಕ್ಷಿ 2ರನ್ನು ಚಾಸಾ 1 ರವರು ಆಕೆಯ ಗಂಡನಾದ ಗುರುಪ್ರಸಾದ್ ಹಾಗೂ ಇನ್ನೊಬ್ಬ ಮಗಳಾದ ಪುಷ್ಪಲತಾಳ

ಸಹಾಯದಿಂದ ನ್ಯಾಯಾಲಯಕ್ಕೆ ವೀಲ್‌ಚೇರ್‌ನಲ್ಲಿ ಕರೆದುಕೊಂಡು ಬಂದಿರುತ್ತಾರೆ. ಈಗ ಚಾಸಾ 2 ರವರಿಗೆ 32 ವರ್ಷ. ನಾವು ಕೇಳಿದ ಪ್ರಶ್ನೆಗೆ ಚಾಸಾ 2 ಸನ್ನೆ ಮೂಲಕ ಮಾತನಾಡುತ್ತಾಳೆ. ಸನ್ನೆಯ ಅರ್ಥವನ್ನೂ ಕೂಡ ಬರವಣಿಗೆಯಲ್ಲಿ ಬರೆದು ತೋರಿಸುತ್ತಾಳೆ.

ಆರೋಪಿಯು ನನ್ನ ಗಂಡನ ತಮ್ಮ. ನಮ್ಮ ಮನೆ ಹಾಗೂ ಆರೋಪಿಯ ಮನೆ ನಮ್ಮ ಊರಿನಲ್ಲಿ ಸ್ವಲ್ಪ ದೂರ ಇವೆ. ನನಗೆ ಮೂರು ಜನ ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ಚಾಸಾ 2 ನನ್ನ ಎರಡನೇ ಮಗಳು. ನನ್ನ 4ನೇ ಮಗ ಆನಂದ, ಆತನು ಎಬಿಬಿ ಕಂಪನಿಯಲ್ಲಿ ಕೆಲಸ ಮಾಡುತ್ತಾನೆ. ನನಗೆ ಇನ್ನೂ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ನನ್ನ ಗಂಡ ಎಚ್‌ಎಂಟಿ ಕಂಪನಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು, ಕಂಪನಿ ಬಂದ್ ಆಗಿದ್ದರಿಂದ ಈಗ ಕನ್ನಮಂಗಲದಲ್ಲಿ ಕೆಲಸಕ್ಕೆ ಹೋಗುತ್ತಾರೆ.

ದಿಃ 21.04.2015ರಂದು ನನ್ನ ಚಿಕ್ಕಮಗಳಾದ ಪುಷ್ಪಲತಾರವರು ಮನೆಗೆ ಬಂದಿದ್ದಳು. ಘಾಟಿ ಸುಬ್ರಮಣ್ಯ ದೇವಸ್ಥಾನಕ್ಕೆ ಹೋಗೋಣ ಎಂದು ಹೇಳಿದ್ದರಿಂದ ನಾನು ಹಾಗೂ ನನ್ನ ಮಗಳಾದ ಪುಷ್ಪಲತಾ ದೇವಸ್ಥಾನಕ್ಕೆ ಹೋಗಿದ್ದೆವು. ಮನೆಯಲ್ಲಿ ಚಾಸಾ 2 ಮಾತ್ರ ಇದ್ದಳು. ಸಾಯಂಕಾಲ ದೇವಸ್ಥಾನದಿಂದ 5.30ಕ್ಕೆ ಮರಳಿ ಮನೆಗೆ ಬಂದೆವು. ಆಗ ಚಾಸಾ 2 ತನ್ನ ಬಟ್ಟೆಯನ್ನು ತೋರಿಸಿ ( ಸಾಕ್ಷಿಯು ಕೈಯ್ಯನ್ನು ತಮ್ಮ ಸೊಂಟದವರೆಗೆ ಬಟ್ಟೆಯನ್ನು ಎತ್ತಿದ ಹಾಗೆ ಮಾಡಿ ತೋರಿಸಿ ಅತ್ಯಾಚಾರ ಮಾಡಿರುತ್ತಾನೆ ಎಂದು ಸನ್ನೆ ಮೂಲಕ ತಿಳಿಸಿರುತ್ತಾಳೆ.) ಆರೋಪಿ ಸಾಯಂಕಾಲ 4.30ಕ್ಕೆ ಮನೆಗೆ ಬಂದು ತನ್ನನ್ನು ಅತ್ಯಾಚಾರ ಮಾಡಿರುತ್ತಾನೆ ಎಂದು ಹೇಳಿ ಅವಳು ತನ್ನ ಎದೆಯ ಮೇಲೆ, ಬೆನ್ನಿನ ಮೇಲೆ, ಮುಖಕ್ಕೆ ಕಚ್ಚಿರುತ್ತಾನೆ ಎಂದು ಹೇಳಿ ತೋರಿಸಿದಳು ನಾನು ಸದರಿ ಗಾಯಗಳನ್ನು ನೋಡಿರುತ್ತೇನೆ. ಚಾಸಾ 2 ತನ್ನ ಮೈಮೇಲೆ ಇರುವ ಎಲ್ಲಾ ಬಟ್ಟೆಗಳನ್ನು ಕುತ್ತಿಗೆಯವರೆಗೆ ಎತ್ತಿ ತೋರಿಸಿದಳು ನಾನು ನೋಡಿರುತ್ತೇನೆ. ಚಾಸಾ 2 ತನ್ನ ಶಕ್ತಿಮೀರಿ ಕಿರುಚಿಕೊಂಡಿದ್ದು

ಕಿರುಚಾಟದ ಶಬ್ದ ಕೇಳಿ ಪಕ್ಕದ ಮನೆಯಲ್ಲಿರುವ ಚಾಸಾ 4 ರವರು ಮನೆಗೆ ಬಂದಿದ್ದು ಘಟನೆಯನ್ನು ನೋಡಿರುತ್ತಾರೆ. ಚಾಸಾ 4 ರವರು ಭಯಗೊಂಡು ಪಕ್ಕದ ಮನೆಯಲ್ಲಿರುವವರನ್ನು ಕರೆಸುವಷ್ಟರಲ್ಲಿ ಆರೋಪಿಯು ತನ್ನ ಬಟ್ಟೆಗಳನ್ನು ತೆಗೆದುಕೊಂಡು ಅಲ್ಲಿಂದ ಓಡಿಹೋಗಿರುತ್ತಾನೆ ಎಂದು ಹೇಳಿದರು. ಆರೋಪಿಯು ಮನೆಯ ಒಳಗೆ ಪ್ರವೇಶ ಮಾಡಿದಾಗ ಬಾಗಿಲನ್ನು ಮನೆಯ ಒಳಗಿನಿಂದ ಮುಚ್ಚಿಕೊಂಡಿದ್ದನು. ಚಾಸಾ 4 ಬಾಗಿಲನ್ನು ತಳ್ಳಿ ಆರೋಪಿಯು ಚಾಸಾ 2 ರ ಮೇಲೆ ಬಿದ್ದು ಅತ್ಯಾಚಾರ ಮಾಡಿರುವುದನ್ನು ನೋಡಿರುತ್ತಾಳೆ ಮತ್ತು ಆರೋಪಿಯ ಮೈಮೇಲೆ ಯಾವುದೇ ಬಟ್ಟೆ ಇಲ್ಲದಿರುವುದನ್ನು ಸಹ ನೋಡಿರುತ್ತಾಳೆ. ಚಾಸಾ 2 ರವರಿಗೆ ಕೆನ್ನೆ ಮೇಲೆ, ಎದೆ ಮೇಲೆ ಹಾಗೂ ಬೆನ್ನಿನ ಮೇಲೆ ಕಚ್ಚಿದ ಹಾಗೂ ತರಚಿದ ಗಾಯವನ್ನು ನೋಡಿರುತ್ತೇನೆ. ಈ ಕುರಿತಂತೆ ನಾನು ಪಿರ್ಯಾದಿಯನ್ನು ನೀಡಿರುತ್ತೇನೆ. ಸಾಕ್ಷಿ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ಪಿರ್ಯಾದಿಯನ್ನು ನೀಡಿದ ನಂತರ ಪೋಲಿಸರು ನಮ್ಮ ಮನೆಗೆ ಬಂದಿದ್ದರು ಮಹಜರು ಕ್ರಮ ಜರುಗಿಸಿರುತ್ತಾರೆ. ಪೋಲಿಸರು ಮಹಜರು ಕ್ರಮ ಜರುಗಿಸುವಾಗ ನಾನು, ಚಾಸಾ 4, 5 ಮತ್ತು 8 ರವರು ಹಾಜರಿದ್ದೆವು, ಪೋಲಿಸರಿಗೆ ಸ್ಥಳವನ್ನು ಚಾಸಾ 2 ರವರು ತೋರಿಸಿರುತ್ತಾರೆ. ಚಾಸಾ 2 ನ್ನು ಪೋಲಿಸರು ಅದೇ ದಿನ ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಗೆ ಪರೀಕ್ಷೆಗೆ ಕರೆದುಕೊಂಡು ಹೋದರು ಅವರೊಂದಿಗೆ ನಾನು ಹೋಗಿರುತ್ತೇನೆ ನನ್ನೊಂದಿಗೆ ನನ್ನ ದೊಡ್ಡ ಮಗಳು ಲೇಪಾಕ್ಷಿ ಬಂದಿದ್ದಳು. ಅವಳ ಸಹಿಯನ್ನು ಪಡೆದಿರುತ್ತಾರೆ. ವೈದ್ಯರು ಚಾಸಾ 2 ನ್ನು ಪರೀಕ್ಷೆಗೆ ಒಳಪಡಿಸಿರುತ್ತಾರೆ. ಪರೀಕ್ಷೆ ಕಾಲದಲ್ಲಿ ಚಾಸ 2 ರವರ ಬಟ್ಟೆಯಾದ ನೈಟಿಯನ್ನು ವೈದ್ಯರು ಪಡೆದಿರುತ್ತಾರೆ. ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಬಿಳಿ ಬಟ್ಟೆಯಲ್ಲಿ ಅರಗು ಹಾಕಿ ಸೀಲ್ ಮಾಡಿದ

ಬಟ್ಟೆಯನ್ನು ತೆರೆಯಲು ಅನುಮತಿಯನ್ನು ಕೇಳಿರುತ್ತಾರೆ ಸದರಿ ಸೀಲ್ ಅನ್ನು ಪರಿಶೀಲಿಸಿ ಆರೋಪಿ ಪರ ವಕೀಲರ ಸಮಕ್ಷಮ ತೆರೆಯಲು ಅನುಮತಿ ನೀಡಲಾಯಿತು. ಸದರಿ ಕವರನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ನೈಟಿ ಇದ್ದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಸದರಿ ಬಟ್ಟೆಯನ್ನು ಮುಮಾ 1 ಎಂದು ಗುರುತಿಸಲಾಯಿತು. ಮುಮಾ 1ನ್ನು ಚಾಸಾ 2/ನೊಂದ ಮಹಿಳೆ ಉಪಯೋಗಿಸುತ್ತಿದ್ದಳು. ವೈದ್ಯರು ಪರೀಕ್ಷೆ ಕಾಲದಲ್ಲಿ ಅವಳ ಹೇಳಿಕೆಯನ್ನು ಅವಳ ಕೈಬರಹದಿಂದ ಬರೆಯಿಸಿ ಪಡೆದಿರುತ್ತಾರೆ. ಅತ್ಯಾಚಾರ ಮಾಡಿದ್ದರಿಂದ ಚಾಸಾ 2 ರವರ ಮನಸ್ಸಿಗೆ ಬೇಜಾರು ಮಾಡಿಕೊಂಡು ಸರಿಯಾಗಿ ಊಟ ಮಾಡುವುದಿಲ್ಲ ಅವಳು ಜುಗುಪ್ಸೆಗೊಂಡಿದ್ದಾಳೆ. ಈಗ ಅವಳನ್ನು ಮಗುವಿನ ತರಹ ಜೋಪಾನ ಜತನ ಮಾಡುತ್ತಿದ್ದೇವೆ. ಆರೋಪಿಯು ನನ್ನ ಮಗಳಿಗೆ ಚಿಕ್ಕಪ್ಪನಾಗಬೇಕು. ಚಿಕ್ಕಪ್ಪನೇ ಅವಳನ್ನು ಅತ್ಯಾಚಾರ ಮಾಡಿರುತ್ತಾನೆ ಎಂದು ಕಣ್ಣೀರು ಸುರಿಸುತ್ತಾ ಸಾಕ್ಷಿ ಹೇಳುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂವಿಕೆ ವಕೀಲರಿಂದ ಃ**

ಪಾಟೀ ಸವಾಲಿಗೆ ಕಾಲಾವಕಾಶ ಕೇಳುತ್ತಿದ್ದು ರೂ.1000/- ದಂಡದೊಂದಿಗೆ ಮುಂದೂಡಲಾಯಿತು. ಆರೋಪಿಯು ದಂಡವನ್ನು ಪಾವತಿಸಿರುತ್ತಾರೆ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಒಳದೃಶ್ಯಾವಳಿ ಮೂಲಕ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಮೋಹನ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ. 18/2018**

**(ಪ್ರಾ.ಸಾ.1 / ಚಾ.ಸಾ.-2)**

ತಾಃ 24-04-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಗುರುಪ್ರಸಾದ್ ಎನ್

ತಂದೆಯ ಹೆಸರು : ನಾರಾಯಣ ಬಿ
ವಯಸ್ಸು : 34 ವರ್ಷ
ಉದ್ಯೋಗ : ಗೋಲ್ಡನ್ ತುಲಿಫ್ ಹೋಟೆಲ್‌ನಲ್ಲಿ ರೂಂ ಡಿವಿಜನ್ ಮ್ಯಾನೇಜರ್
ವಾಸ ಸ್ಥಳ : ಅತ್ತಿಬೆಲೆ, ಆನೇಕಲ್ ತಾಲ್ಲೂಕು

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

ಕಳೆದ ಎರಡೂವರೆ ವರ್ಷಗಳಿಂದ ಗೋಲ್ಡನ್ ತುಲಿಪ್‌ನಲ್ಲಿ ರೂಂ ಡಿವಿಜನ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಹೋಟೆಲ್ ನಲ್ಲಿ ಒಟ್ಟು 72 ಕೊಠಡಿಗಳಿವೆ. ಅದು ಪಂಚತಾರಾ ಹೋಟೆಲ್ ಆಗಿರುತ್ತದೆ. ಕೊಠಡಿಯನ್ನು ನೀಡುವಾಗ ಗುರುತಿನ ಪತ್ರಗಳನ್ನು ಪಡೆಯುತ್ತೇವೆ. ಎಲೆಕ್ಟ್ರಾನಿಕ್ ಸಿಟಿಯ ಪೋಲಿಸರು ನಮ್ಮ ಹೋಟೆಲ್‌ಗೆ ಬಂದಾಗ ಅವರ ಕೋರಿಕೆಯಂತೆ ಒಂದು ಪತ್ರವನ್ನು ನೀಡಿರುತ್ತೇನೆ ಸಾಕ್ಷಿ ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ದಿಃ 16.11.2015 ರ ರಾತ್ರಿ ನೊಂದ ಮಹಿಳೆ ಚಾಸಾ 1 ಹಾಗೂ ಆರೋಪಿ ಸೈಕಾಂತ್ ಮೆಹತಿ (saikant maiti) ರವರು ಕೊಠಡಿ ಸಂಃ 102ನ್ನು ಅವರಿಗೆ

ನೀಡಿರುತ್ತೇನೆ. ಸದರಿ ರೂಂನ್ನು ಆನ್ಲೈನ್ ಮೂಲಕ ಬುಕ್ ಮಾಡಿದ್ದರಿಂದ ಹಂಚಿಕೆ ಮಾಡಲಾಗಿದೆ. ಸಾಕ್ಷಿಯು ಕಂಪ್ಯೂಟರ್‌ನಿಂದ ತೆಗೆದುಕೊಂಡ ವೋಚರ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಸಾಕ್ಷಿಯು ರೂಂನ್ನು ಹಂಚಿಕೆ ಮಾಡಿರುವ ಕುರಿತು ಅರ್ಜಿಯ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಆರೋಪಿ ಮತ್ತು ನೊಂದ ಮಹಿಳೆ ನಮ್ಮ ಹೋಟೆಲ್‌ನಲ್ಲಿ ಜೊತೆಯಾಗಿ ರೂಂನ್ನು ಪಡೆದಿರುವ ಬಗ್ಗೆ ದಾಖಲೆಗಳನ್ನು ಪೊಲಿಸರಿಗೆ ನೀಡಿರುತ್ತೇನೆ. ಅವರು ನಮ್ಮ ಹೋಟೆಲ್‌ಗೆ ದಿಃ 03.1.2016 ರಂದು ಬಂದಿದ್ದು ಅವರಿಗೆ ರೂಂ ನಂಬರ್ 216ನ್ನು ನೀಡಿದ್ದು ಅದಕ್ಕೆ ಸಂಬಂಧಿಸಿದಂತೆ ವೋಚರ್, ಅರ್ಜಿ, ಅದಕ್ಕೆ ಸಂಬಂಧಿಸಿದ ಕಂಪ್ಯೂಟರ್ ಜನರೇಟರ್ ಅರ್ಜಿ, ರಸೀದಿ, ಆರೋಪಿ ಹಾಗೂ ನೊಂದ ಮಹಿಳೆಯ ಗುರುತಿನ ಪತ್ರಗಳನ್ನು ಪೋಲಿಸರಿಗೆ ನೀಡಿರುತ್ತೇನೆ. ಸಾಕ್ಷಿ ಸದರಿಗಳನ್ನು ನೋಡಿ ಗುರುತಿಸಿದ್ದು ವೋಚರ್‌ನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4 ಎ ಎಂದು, ಅರ್ಜಿಯನ್ನು ನಿಪಿ 5 ಎಂದು, ಸಾಕ್ಷಿ ಸಹಿಯನ್ನು ನಿಪಿ 5 ಎ ಎಂದು, ಬಿಲ್ಲನ್ನು ನಿಪಿ 6 ಎಂದು, ಸಾಕ್ಷಿ ಸಹಿಯನ್ನು ನಿಪಿ 6 ಎ ಎಂದು, ಆರೋಪಿ ಹಾಗೂ ನೊಂದ ಮಹಿಳೆಯ ಗುರುತಿನ ಪತ್ರಗಳನ್ನು ಜೊತೆಯಾಗಿ ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7 ಎ ಎಂದು ಗುರುತಿಸಲಾಯಿತು. ನಿಪಿ1ರಲ್ಲಿ ಆರೋಪಿ ಹಾಗೂ ನೊಂದ ಮಹಿಳೆ ದಿಃ 16.11.2015 ರಂದು ಒಂದು ರಾತ್ರಿ 13.32 ಗಂಟೆಗೆ ಬುಕ್ ಮಾಡಿ ಹೋಟೆಲ್ ನ್ನು ದಿಃ 17.11.2016 ರಂದು 12.38ಕ್ಕೆ ಖಾಲಿ ಮಾಡಿರುತ್ತಾರೆ ಎಂದು ಬರೆಯಲಾಗಿದ್ದು ಅದು ತಪ್ಪಾಗಿ ಆಗಿರುತ್ತದೆ ಆದರೆ ಸಾಕ್ಷಿಯು ರೂಂನ್ನು ಖಾಲಿ ಮಾಡಿರುವ ದಿಃ 17.11.2015ರಂದು 12.38ಕ್ಕೆ ಖಾಲಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಗುರುತಿನ ಚೀಟಿಯಲ್ಲಿನ ಆರೋಪಿ ಹಾಗೂ ನೊಂದ ಮಹಿಳೆಯನ್ನು ನೋಡಿದರೆ ಗುರುತಿಸುತ್ತೇನೆ. ಈ

ದಿನ ಆರೋಪಿಯು ಗೈರು ಹಾಜರಿದ್ದು ಆರೋಪಿಯನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಹೇಳುತ್ತಾರೆ. ಪೋಲಿಸರು ನಮ್ಮ ಹೋಟೆಲ್‌ಗೆ ಘಟನೆ ಸಂಬವಿದ 2-3 ತಿಂಗಳ ಬಂದಿರುತ್ತಾರೆ ಬಂದಾಗ ಪೋಲಿಸರಿಗೆ ನಿಪಿ 1 ರಿಂದ 7 ನ್ನು ಹಾಜರುಪಡಿಸಿರುತ್ತೇನೆ. ಸ್ಥಳದಲ್ಲಿಯೇ ಪೋಲಿಸರು ಮಹಜರು ಕ್ರಮವನ್ನು ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಪೋಲಿಸರು ರೂಂ ಸಂಃ 102 ಹಾಗೂ 216ರಲ್ಲಿ ಮಹಜರು ಕ್ರಮ ಜರುಗಿಸಿರುತ್ತಾರೆ ಅವರಿಗೆ ರೂಂಗಳನ್ನು ನಾನೇ ತೋರಿಸಿರುತ್ತೇನೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 8 ಎ ಎಂದು ಗುರುತಿಸಲಾಯಿತು. ನಾನು ಸಹಿ ಮಾಡುವಾಗ ನಮ್ಮ ಹೋಟೆಲಿನ ಇನ್ನೊಬ್ಬ ಮ್ಯಾನೇಜರ್ ಆದ ಚಾಸಾ 3 ರವರು ಹಾಜರಿದ್ದು ಸಹಿ ಮಾಡಿರುತ್ತಾರೆ, ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಬಿ ಎಂದು ಗುರುತಿಸಲಾಯಿತು. ಪೋಲಿಸರು ಮಹಜರು ಮಾಡಿದ್ದರಿಂದ ಆರೋಪಿ ಹಾಗೂ ನೊಂದ ಮಹಿಳೆಯ ಮದ್ಯೆ ವ್ಯಾಜ್ಯ ಇರುವುದು ಗೊತ್ತಾಯಿತು. ಆದಿನ ಪೋಲಿಸರು ನನಗೆ ನೋಟಿಸನ್ನು ನೀಡಿರುತ್ತಾರೆ, ಸಾಕ್ಷಿ ಸದರಿ ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಪಿಎಸ್ ವಕೀಲರಿಂದ ಃ**

ನಮ್ಮ ಹೋಟೆಲ್‌ಗೆ ಇಬ್ಬರು ಪೋಲಿಸರು ಬಂದಿದ್ದರು ಅವರೊಂದಿಗೆ ಬೇರೆ ಯಾರೂ ಇರಲಿಲ್ಲ, ರೂಂನ್ನು ಆನ್ಲೈನ್ ಮೂಲಕ ಬುಕ್ ಮಾಡಿದ್ದರು ಎಂದರೆ ಸರಿ. ನಿಪಿ4ರಲ್ಲಿ ರೂಂ ನಂಬರ್ 216ನ್ನು ನೊಂದ ಮಹಿಳೆ ಬುಕ್ ಮಾಡಿದ್ದಳು ಎಂದರೆ ಸರಿ.

ನೊಂದ ಮಹಿಳೆ ಹಾಗೂ ಅವರೊಂದಿಗೆ ಬಂದ ವ್ಯಕ್ತಿ ಸಹಜವಾಗಿ ಇದ್ದರು ಯಾವುದೇ ರೀತಿಯ ಅಸಹಜ ಘಟನೆಗಳು ಆಗಿರುವುದಿಲ್ಲ. ನೊಂದ ಮಹಿಳೆ ರೂಂನ್ನು ಬಿಟ್ಟು ಹೋಗುವಾಗ ಯಾವುದೇ ಗಲಾಟೆಗಳಾದ ವಿಷಯಗಳನ್ನು ಹೇಳಿರುವುದಿಲ್ಲ ಎಂದರೆ ಸರಿ. ನಿಪಿ5 ಮತ್ತು 6ರಲ್ಲಿ ರೂಂಮಿನ ಬಾಡಿಗೆಯನ್ನು ನೊಂದ ಮಹಿಳೆಯೇ ನೀಡಿರುತ್ತಾಳೆ ಎಂದರೆ ಸರಿ. ನಿಪಿ 8ರಲ್ಲಿ ಬರವಣಿಗೆಯನ್ನು ಮಾಡಲು ನಾನು ಪೊಲಿಸರಿಗೆ ಹೇಳಿರುವುದಿಲ್ಲ ಹಾಗೂ ಚಾಸಾ 3 ರವರು ಕೂಡ ಹೇಳಿರುವುದಿಲ್ಲ. ಪೋಲಿಸರು ನಿಪಿ 8ರ ಮೇಲೆ ಸಹಿಯನ್ನು ಬಿಟ್ಟು ಬೇರೆ ಬರವಣಿಗೆಯನ್ನು ಮಾಡಿರುವುದಿಲ್ಲ. ರೂಂ ನಂಬರ್ 102 ಹಾಗೂ 216ರಲ್ಲಿ ಏನು ಘಟನೆಯಾಗಿದೆ ಎಂದು ನನಗೆ ಹಾಗೂ ಚಾಸಾ 3 ರವರಿಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಿಪಿ2 ಹಾಗೂ 3ನ್ನು ಆನ್ಲೈನ್ ಮೂಲಕ ಬುಕ್ ಮಾಡಿದ ಪ್ರತಿಗಳು ಎಂದರೆ ಸರಿ. ನಿಪಿ 2 ಹಾಗೂ 3ರಲ್ಲಿ ಆರೋಪಿಯೊಂದಿಗೆ ಯಾರು ಇರುತ್ತಿದ್ದರು ಎಂದು ಮಾಹಿತಿ ಇರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ರೂಂನ್ನು ಹಂಚಿಕೆ ಮಾಡಿದ ನಂತರ ರೂಂ ನಲ್ಲಿ ಇರುವವರ ಗುರುತಿನ ಪತ್ರಗಳನ್ನು ಪಡೆಯುತ್ತೇವೆ. ನಮ್ಮ ಹೋಟೆಲ್‌ನ ರಿಜಿಸ್ಟ್ರಾರ್‌ನಲ್ಲಿ ಬಂದು ಹೋಗುವವರ ಹೆಸರನ್ನು ಬರೆದಿರುತ್ತೇವೆ ಎಂದರೆ ಸರಿ, ಸದರಿ ರಿಜಿಸ್ಟ್ರಾರ್‌ನ್ನು ಪೋಲಿಸರಿಗೆ ನೀಡಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ರಿಜಿಸ್ಟ್ರಾರ್‌ನ ಆಧಾರದ ಮೇಲೆಯೇ ಪೋಲಿಸರಿಗೆ ರಸೀದಿ ಪತ್ರಗಳನ್ನು ನೀಡಿರುತ್ತೇವೆ. ರಿಜಿಸ್ಟ್ರಾರ್‌ನ್ನು ಪರಿಶೀಲಿಸಿ ನಿಪಿ2 ಹಾಗೂ 3ನ್ನು ನೀಡಿರುತ್ತೇವೆ. ನಿಪಿ2 ಮತ್ತು 3ರಲಿಲ ಆರೋಪಿ ಹೆಸರು ಮಾತ್ರ ಇದ್ದು ಅವರೊಂದಿಗೆ ಯೂರು ಇದ್ದರು ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಮೋಹನ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ. /**

**(ಪ್ರಾ.ಸಾ. / ಚಾ.ಸಾ.-)**

ತಾಃ 11-04-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು ಃ

ತಂದೆಯ ಹೆಸರು/ ಃ
ಗಂಡನ ಹೆಸರು
ವಯಸ್ಸು ಃ ವರ್ಷ
ಉದ್ಯೋಗ ಃ
ವಾಸ ಸ್ಥಳ ಃ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

**(**ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.**)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಃ**

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

**(ಮೋಹನ ಬಾಡಗಂಡಿ)**
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಕೇಸ್. ನಂಃ

ಪಿ.ಡಬ್ಲು.

ಸಾಕ್ಷಿಗೆ ಪ್ರಮಾಣ ವಚನ ನೀಡಿದೆ.

**ತಾ. 02.01.2017**

| | | |
|---|---|---|
| ಸಾಕ್ಷಿದಾರರ ಹೆಸರು | : | |
| ತಂದೆಯ / ಗಂಡನ ಹೆಸರು | : | |
| ವಯಸ್ಸು | : | ವರ್ಷ |
| ಉದ್ಯೋಗ | : | |
| ವಾಸ ಸ್ಥಳ | : | |

**ಮುಖ್ಯ ವಿಚಾರಣೆ ಶ್ರೀ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಇರುತ್ತದೆ, ಅದರಲ್ಲಿ ಕಾಣಿಸಿದ ಸಂಗತಿಗಳು ನನ್ನ ತಿಳುವಳಿಕೆ ಮೇರೆಗೆ ನಿಜ ಇರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದು ಇರುತ್ತದೆ.

ದಿನಾಂಕ 11-10-2018 ರ "ಸಂಯುಕ್ತ ಕರ್ನಾಟಕ" ದಿನ ಪತ್ರಿಕೆಯನ್ನು ಹಾಜರುಪಡಿಸಿದ್ದು , ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ

ಎದುರುದಾರರು ಯಾರು ಇರುವುದಿಲ್ಲ. ಮುಖ್ಯ ವಿಚಾರಣೆಯಲ್ಲಿ ವಿನಂತಿಸಿದಂತೆ ಪ್ರಕರಣವನ್ನು ಡಿಕ್ರಿ ಮಾಡಲು ವಿನಂತಿಸುತ್ತೇನೆ.

**ಪಾಟೀಸವಾಲು ಶ್ರೀ ವಕೀಲರಿಂದ ಃ**

1.

ಮರು ವಿಚಾರಣೆಃ ಇಲ್ಲ

ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.

ಓ. ಹೇ. ಸಾ. ಸ್ವ. ಸಹಿ ಮಾಡಿದ್ದಾರೆ.

**(ಪಿ.ಕೃಷ್ಣ ಭಟ್)**
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾ. ಜಿಲ್ಲೆ, ಬೆಂಗಳೂರು.

**RA. /**

P.W.-1

Witness is present and duly sworn on .03.2018

**Examination-in-chief: By Sri. ++++ Advocate for Petitioner:**

I have filed my affidavit evidence by way of examination-in–chief. I know its contents. They are true and correct. Hence, I put my signature.

I have produced the document Death certificate of Mr.Diana. It is marked as Ex.P.1. I have produced the two Original WILLs dated 26-04-2011 and WILL dated 21-01-2010 and produced the 5 sale deeds all dated 30-03-1996 and They are marked as Ex.P.2 to 6. I have produced the death certificate of Jamshed Jehangir Madan, it is marked as Ex.P.7.

I have produce the daily News Paper “DECCAN CHRONICLE” dated 09-10-2018. It is marked as Ex.P.8. I pray to allow the petition.

**Cross-examination: By Sri.+++++Advocate for Respondent:**

[Typed to my dictation in the open court]

R.O.I. & A. C.

[ Mohan Badagandi)
VI Addl. District & Sessions
Judge.
Bengaluru Rural District.
Bengaluru.